ಉತ್ತರ ಹೇಳಿದಂತೆ ನನಗೆ ನೆನಪಿಲ್ಲ.' ಎಂದು ನನ್ನೊಳಗೆ ಮಾತನಾಡಿಕೊಳ್ಳುತ್ತಿರುವಾಗಲೇ, ಮುಂದಿನ ಮಾತು ಅವನಿಂದ... "ಒಂದು ಸಣ್ಣ ಟಿಪ್ ಕೊಡಬಹುದೇ?"

"ಯಾವುದರ ಬಗ್ಗೆ?"

"ಡ್ರೈವಿಂಗ್ ಬಗ್ಗೆ."

"ಹೋಪ್ ಇಟ್ ಈಸ್ ನಾಟ್ ಶಾವನಿಸ್ಟಿಕ್."

"ಇಲ್ಲ, ಇಲ್ಲ. ಇದು ಯಾವ ಕತ್ತೆ ಕುದುರೆ ಗಾಡಿ ಓಡಿಸಿದರು, ಫಾಲೋ ಮಾಡಿದ್ರೇ ಒಳ್ಳೇದು" ಎಂದು ಚಂದವಾಗಿ ಸಂಬಾಳಿಸಿದ.

"ಇದರಲ್ಲಿ ಯಾರು ಕತ್ತೆ? ಯಾರು ಕುದುರೆ?" ತುಸು ಸಿಟ್ಟಿನಿಂದ ಕೇಳಿದೆ.

"ಎರಡೂ ನಾನೇ. ಸಾಕಾ? ಟಿಪ್ ಕೇಳ್ರೀ..." ಎಂದು ನನ್ನ ಕೋಪವನ್ನ ತನ್ನ ಸಮಯಪ್ರಜ್ಞೆಯಿಂದ ಕಾಣೆಯಾಗಿಸಿದ.

"ಸರಿ ಹೇಳ್ರೀ" ಎಂದೆ.

"ಡ್ರೈವಿಂಗ್ ಸೀಟಲ್ಲಿ ಕುಳಿತು ಸ್ಟೀರಿಂಗ್ ವೀಲ್ ಮೇಲೆ, ಟಾಪಲ್ಲಿ ಕೈನೀಡಿ ಇಡಿ. ಮಣಿಕಟ್ಟು ವೀಲಿನ ಟಾಪಿಗೆ ತಾಕಬೇಕು."

"ಓಕೇ..."

"ನಿಮ್ಮ ಮಣಿಕಟ್ಟಿಂದ ಅಂಗೈಯೂ ಬೆರಳುಗಳೂ ಫ್ರೀಯಾಗಿ ಮೂವಾಗಬೇಕು."

"ಸರಿ."

"ಹಾಗೆ ಮೂವ್ ಆದರೇನೆ ನೀವು ಸ್ಟೀರಿಂಗ್ ವೀಲಿಂದ ಸರಿಯಾದ ದೂರದಲ್ಲಿ ಕುಳಿತಿದ್ದೀರಿ ಅಂಥ ಅರ್ಥ. ಟ್ರೈ ಮಾಡಿ..."

ಅವನು ಹೇಳಿದಂತೆ ಮಾಡಿ ನೋಡಿದೆ. ಅಂಗೈಯನ್ನು ಬೆರಳುಗಳನ್ನು ಆರಾಮಾಗಿ ಆಡಿಸಲು ಸಾಧ್ಯವಾಗಲಿಲ್ಲ.

"ಹೆಚ್ಚಾಗಿ ಲೇಡಿ ಡ್ರೈವರ್ಸ್ ಫ್ರಂಟ್ ವೀಲ್ಸ್ ಕಾರಲ್ಲೇ ಇದೆಯಾಂತಾ ಇಣಕಿ ನೋಡ್ಕೋಂಡೇ ಓಡಿಸ್ತಾರೆ ಅಲ್ವಾ?" ನಗುತ್ತಲೇ ಕೇಳಿದ. ಆದರೂ 'ಏನು ಒಂದು ಕಿಂಡಲ್?' ಎಂದು ದಿಟ್ಟಿಸಿದೆ.

"ಸರಿ ಸರಿ ಕೋಪಿಸಿಕೊಳ್ಳಬೇಡಿ. ಹೆಚ್ಚಾಗಿ ಹಾಗೆ ಓಡಿಸುವಂತೆಯೇ ಇರುತ್ತದೆ. ನೀವು ಬೇಕಾದರೆ ಗಮನಿಸಿ."

ಅವನು ಹೇಳಿದಂತೆ ನಾನೂ ಗಮನಿಸಿದ್ದೆ. ಆದರೆ, ಮುಂದೆ ಸರಿದು ಕುಳಿತು ಗಾಡಿ ಓಡಿಸುವುದಕ್ಕೂ, ಇವನಿಂದ ಹೀಗೊಂದು ಕಿಂಡಲನ್ನು ನಿರೀಕ್ಷಿಸಿರಲಿಲ್ಲ.

"ನಾನು ಹಾಗೆ ಓಡಿಸ್ತಿದ್ದೇನೆಯೇ?"

"ಇಲ್ಲ, ಇಲ್ಲ... ಅದನ್ನ ನೀವು ಸೀಟಲ್ಲಿ ಕುಳಿತಕೂಡಲೇ ಗಮನಿಸಿದೆ. ಬಹುಶಃ ನಿಮ್ಮ ಸೀಟನ್ನ ಸ್ವಲ್ಪ ಎಳೆದುಕೊಳ್ಳಬೇಕಾಗುತ್ತೆ... ಅದಕ್ಕೆ ಹೇಳಿದ್ದು. ಇದೇ ಪೊಸಿಷನಿನಲ್ಲಿ ಗಾಡಿ ಓಡಿಸಿದರೆ ತೋಳುಗಳಿಗೆ ನೋವಾಗುತ್ತೆ..."

"ಯೂಸ್‌ಫುಲ್ ಟಿಪ್... ಥ್ಯಾಂಕ್ ಯೂ" ಎಂದೆ.

"ನಿಮಗೆ ಏನೋ ಕೆಲಸ ಇದೆ ಅಂತ ಹೇಳಿದ್ರಲ್ಲಾ?"

"ಹೌದು ಅಲ್ಲೇ ಹೋಗ್ತಾ ಇದ್ದೀವಿ. ನಾನು ಒಂದು ಕಾಲ್ ಮಾಡ್ತೀನಿ..."

ಕಾರನ್ನು ಸುಲಭವಾಗಿ ತಿರುಗಿಸುತ್ತಲೇ, ಸ್ಪೀಡ್ ಡೈಯಲಿನಲ್ಲಿ ನಂಬರನ್ನು ಒತ್ತಿದೆ. ರಿಂಗ್ ಹೋಯಿತು. ಫೋನನ್ನು ತೆಗೆದು ಕಿವಿಯಲ್ಲಿಟ್ಟುಕೊಂಡು, ತಲೆಯನ್ನು ವಾಲಿಸಿ, ತೋಳಿನ ಮೇಲೆ